ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 45/2025

.........................................................................

CW 01
PW 01

| | | |
|---|---|---|
| ಹೆಸರು | : | ಅಭೀಷೇಕ್ ಕಶ್ಯಪ |
| ತಂದೆಯ ಹೆಸರು | : | ಚಂದ್ರಭೂಷಣ ಝಾ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸಸ್ಥಳ | : | ಸತ್ತೂರ, ಧಾರವಾಡ. |

ದಿನಾಂಕ 16-09-2025 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 2 ಮತ್ತು 3 ಹಾಗೂ ಚಾಸಾ 5, 6 ಮತ್ತು 8 ರವರ ಪರಿಚಯ ಇಲ್ಲ. ಚಾಸಾ 4 ರವರ ಪರಿಚಯ ಇದೆ. ಚಾಸಾ 7 ನನ್ನ ತಂದೆ.

1 ವರ್ಷದ ಹಿಂದೆ ದಿನಾಂಕ 31 ರಂದು ಅಂದರೆ ದೀಪಾವಳಿಯ ಹಿಂದಿನ ದಿನ ನಾನು ಗೋವಾ ಗೆ ಹೋಗುತ್ತಿದ್ದೆ. ಕೆಸರೋಳ್ಳಿಯ ಹತ್ತಿರ ಹೋಗುತ್ತಿದ್ದಾಗ ಒಂದು ಬಸ್ಸು **ತಪ್ಪಾದ** ದಾರಿಗೆ ಬಂದು ನನ್ನ ಟಿ ವಿ ಎಸ್ ರೈಡರ್ ವಾಹನಕ್ಕೆ ಡಿಕ್ಕಿ ಹೊಡೆಯಿತು. ಆಗ ನನಗೆ ತೀವ್ರ ಸ್ವರೂಪದ ಗಾಯ ಆಗಿತ್ತು. ಡಿಕ್ಕಿ ಹೊಡೆದ ನಂತರ ಏನಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನನ್ನು ಯಾರು ಆಸ್ಪತ್ರೆಗೆ ಸೇರಿಸಿದರು ಎನ್ನುವುದು ಗೊತ್ತಿಲ್ಲ. ನನಗೆ ಘಟನೆಯ 16 ದಿನದ ನಂತರ ಪ್ರಜ್ಞೆ ಬಂದಿರುತ್ತದೆ. ಘಟನೆಯಾದ ಸುಮಾರು 2 ತಿಂಗಳ ನಂತರ ನನ್ನ ತಂದೆ ನನ್ನಿಂದ ದೂರಿಗೆ ಸಹಿ ಪಡೆದಿರುತ್ತಾರೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಗುರುತಿಸಿರುವುದರಿಂದ ದೂರನ್ನು **ನಿಪಿ 1 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 1ಎ ಎಂದು** ಗುರುತಿಸಲಾಯಿತು. ಆ ದಿನ ಬಸ್ಸನ್ನು ಯಾರು ಚಲಾಯಿಸುತ್ತಿದ್ದರು ಎನ್ನುವುದು ನಾನು ನೋಡಿಲ್ಲ. ಬಸ್ಸ್ ಹಸಿರು ಬಣ್ಣದಾಗಿತ್ತು, ಅದರ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 31-10-2024 ರಂದು 03-35 ರಂದು ದೂರು ನೀಡಿ ಅದರಲ್ಲಿ ಬಸ್ ನ ಚಾಲಕ ಅತೀ ವೇಗವಾಗಿ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಹೊಡೆದು ಅಪಘಾತ ಪಡಿಸಿದನು ಎಂದು ಬರೆಯಿಸಿರುತ್ತೀರಿ ಎಂದರೆ ಸರಿ. ನಿಮ್ಮ ವಾಹನದ ಸಂಖ್ಯೆ ಕೆಎ-25-ಎಚ್ ಜೆ-2647 ಆಗಿತ್ತು ಮತ್ತು ಅಪಘಾತ ಪಡಿಸಿದ ಬಸ್ ವಾಹನ ಸಂಖ್ಯೆ ಕೆಎ-25-ಎಫ್-3374 ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 1 ರಂತೆ ದೂರು ನೀಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎಸ್ ಎಲ್ ಎಸ್ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.